ಶ್ರೀ ಎಂ.ಎಸ್. ಕೃಷ್ಣನ್.—ನನಗೆ ಅರ್ಥವಾಗುವುದಿಲ್ಲ. ನಾವು ನೀವು ಸ್ನೇಹಿತರು ನಿಜ. ನಿಮ್ಮ ಬಗ್ಗೆ ಗೌರವ ಇದೆ. ಯಾವಾಗಲೂ ಗೌರವ ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ತಮ್ಮ ತೀರ್ಮಾನಕ್ಕೆ ತಲೆಬಾಗುತ್ತೇವೆ, ನಮಗೆ ನಿಮ್ಮ ಬಗ್ಗೆ ಗೌರವ ಇದೆ. ಇನ್ನು ಮುಂದೆ ಕೌಲ್ ಅಂಡ್ ಶಕ್ದರ್ ಡಿಸಿಷನ್ಸ್ ಇದ್ದರೆ.....

(ಗೊಂದಲ)

MR. SPEAKER.—I will take your suggestions. I will take your experienced views.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕನ್‌ವೆನ್‌ಷನ್ ಪ್ರಕಾರ Speaker has withheld the questions.

12-30 P.M.

MR. SPEAKER.—I request you to resume your seat. ನಾನು ನಿಮ್ಮನ್ನು ಕರೆದು I will take your views also.

ವರದಿಗಳನ್ನು ಒಪ್ಪಿಸುವುದು

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಸನ್ಮಾನ್ಯ ಅಧ್ಯಕ್ಷರೇ, ನಾನು ಅಧೀನ ಶಾಸನಾ ರಚನಾ ಸಮಿತಿಯ ಅನೇ ಮತ್ತು ಐನೇ ವರದಿಗಳನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅಧೀನ ಶಾಸನಾ, ರಚನಾ ಸಮಿತಿಯ ಅನೇ ಮತ್ತು ಐನೇ ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಬಿ. ಎಚ್. ಎಂಕಾನಾಯಕ್.—ಸನ್ಮಾನ್ಯ ಅಧ್ಯಕ್ಷರೇ, ನನ್ನ ಹೆಸರು ಕೂಡ ಸೂಚನೆ ಆಗಿತ್ತು, ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ನಿಮ್ಮ ಹೆಸರು ಆಗಲೇ ಬಂದು ಹೋಯಿತು, ಉತ್ತರ ಕೊಡಿಸುತ್ತೇನೆ. ನೀವು ಕುಳಿತುಕೊಳ್ಳಿ.

ಗಮನ ಸೆಳೆಯುವ ಸೂಚನೆ

ತುಮಕೂರು ಜಿಲ್ಲೆಯ ಪೊಲೇನಹಳ್ಳಿಯಲ್ಲಿ ಹರಿಜನ ಗಿರಿಜನ ಕುಟುಂಬ ದವರು ಸಾಂಕ್ರಾಮಿಕ ರೋಗದಿಂದ ಮೃತಪಟ್ಟಿರುವುದು.

ಅಧ್ಯಕ್ಷರು.—ಈಗ ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಹಾಗೂ ಶ್ರೀ ಬಿ ಲಕ್ಕಪ್ಪನವರು; ತಮ್ಮ ಸೂಚನೆಯನ್ನು ಕೇಳಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ ನಾನು ತುಮಕೂರು ಜಿಲ್ಲೆಯ ಪೊಲೇನಹಳ್ಳಿಯಲ್ಲಿ ಹರಿಜನ ಗಿರಿಜನ ವರ್ಗಕ್ಕೆ ಸೇರಿದ ಸುಮಾರು ೩೦ ಮಕ್ಕಳು ಸಾಂಕ್ರಾಮಿ ರೋಗದಿಂದ ಮೃತಪಟ್ಟಿರುವುದರಿಂದ ಉದ್ಭವಿಸಿರುವ ಗಂಭೀರ ಪರಿಸ್ಥಿತಿಯ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ತತ್ಸಂಬಂಧವಾಗಿ ನಾನು ಈ ಹೇಳಿಕೆಯನ್ನು ಮಾಡಬಯಸುತ್ತೇನೆ.

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಪೊಲೇನಹಳ್ಳಿಯ ಜನ ಸಂಖ್ಯೆ ೧೧೧೪ ಇದ್ದು ಅದರಲ್ಲಿ ೪೨೫ ಜನ ಹರಿಜನ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಆರು ವರ್ಷ ವಯಸ್ಸಿಗಿಂತ ಕೆಳಗಿನ ಮಕ್ಕಳ ಸಂಖ್ಯೆ ೧೦೨ ಇದ್ದು ಅದರಲ್ಲಿ ೪೪ ಮಕ್ಕಳು ಹರಿಜನ ಗುಂಪಿಗೆ ಸೇರಿದವರಾಗಿರುತ್ತಾರೆ.